# ಡಾ.ರಾಜ್, ನಟಿ ಮಾಧವಿ ಜತೆ ಫೋಟೊ ಕ್ಲಿಕ್ಕಿಸಿಕೊಂಡಾಗ...

■ ಗಂಗಾ ಆರ್. ಭಟ್ಟ, ಬೆಳಗಾವಿ

ಇದು ಮೂವತ್ತು ವರ್ಷಗಳ ಹಿಂದಿನ ನೆನಪು. ಯಾವಾಗಲೂ ಖುಷಿ ಕೊಡುವ ಸದಾ ಮೆಲುಕು ಹಾಕಿದರೆ ಕಚಗುಳಿ ಇಡುವ ನವಿರಾದ ನೆನಪು. ಸಿನಿಮಾ ರಂಗ ಒಂದು ಕನಸಿನ ಲೋಕದಂತೆ ಎಂದು ಭ್ರಮಿಸುವ ವಯಸ್ಸು ಅದು. ಚಿತ್ರನಟ ನಟಿಯರೆಂದರೆ ವಿಶೇಷ ವ್ಯಕ್ತಿಗಳೆಂಬ ಭಾವನೆ. ಅಣ್ಣಾವ್ರ ಚಿತ್ರಗಳೆಂದರೆ ನೋಡಲೇಬೇಕು. ಇಂತಹ ಸಂದರ್ಭದಲ್ಲಿ ಅಣ್ಣಾವ್ರು ಮತ್ತು ಭಾವುಕ ನಟಿ ಮಾಧವಿಯವರು ನಮ್ಮೆದುರಿಗೆ ಸಿಕ್ಕಾಗ ಹೇಗಾಗಿರಬೇಡ?

1986 ರಲ್ಲಿ ನಾವು ಧರ್ಮಸ್ಥಳ ಮಂಜುನಾಥ ಸ್ವಾಮಿಯ ದರ್ಶನ ಪಡೆಯಲು ಹೋಗಿದ್ದೆವು. ದೇವರ ದರ್ಶನ ಮುಗಿಸಿ ಪ್ರಸಾದ ಸ್ವೀಕರಿಸಲು ಅನ್ನಛತ್ರಕ್ಕೆ ಹೋದಾಗ ನಮ್ಮ ನೆಚ್ಚಿನ ಡಾ.ರಾಜಕುಮಾರ್ ಧರ್ಮಸ್ಥಳದಲ್ಲಿ ಇದ್ದಾರೆ ಎಂಬ ವಿಷಯ ತಿಳಿಯಿತು. ಕನ್ನಡ ಚಿತ್ರ 'ಶ್ರುತಿ ಸೇರಿದಾಗ' ಚಿತ್ರೀಕರಣ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುತ್ತಿದೆ ಎಂದು ಕೆಲ ಯಾತ್ರಿಕರು ಹೇಳಿದರು. ನಮ್ಮ ಸಂತೋಷಕ್ಕೆ ಪಾರವೇ ಇರಲಿಲ್ಲ. ಕನ್ನಡದ ಮೇರು ನಾಯಕ ನಟನನ್ನು ಹತ್ತಿರದಿಂದ ನೋಡುವ ಅವಕಾಶ ಇದೆ. ಅದನ್ನು ನೋಡಿಯೇ ಮುಂದಿನ ಕಾರ್ಯಕ್ರಮ ಎಂದು ನಿರ್ಧರಿಸಿದೆವು.

ಪ್ರಸಾದದ ಊಟ ಮುಗಿಸಿ ಹೊರ ಬರುವಾಗ ಎದುರಿಗೆ ಬರುತ್ತಿದ್ದರು ನಮ್ಮ ಕಣ್ಮಣಿ ಅಚ್ಚುಮೆಚ್ಚಿನ ಡಾ.ರಾಜ್. ನಮ್ಮ ಕಣ್ಣುಗಳನ್ನೇ ನಂಬಲಾಗಲಿಲ್ಲ. ಇಷ್ಟು ಹತ್ತಿರದಿಂದ ಅವರನ್ನು ಕಾಣುತ್ತಿದ್ದೇವೆ. ಆವಾಕ್ಕಾಗಿ ಕಣ್ಣು ಬಿಟ್ಟುಕೊಂಡು ನಿಂತಿದ್ದೇವೆ. ಅರೆಕ್ಷಣ ಏನು ಮಾಡಬೇಕು ಹೇಗೆ ಅವರೊಟ್ಟಿಗೆ ಮಾತನಾಡಬೇಕು ಎಂಬುದು ಹೊಳೆಯುತ್ತಿಲ್ಲ! ಕಕ್ಕಾಬಿಕ್ಕಿಯಾದಂತಹ ಅನುಭವ. ಅಷ್ಟರಲ್ಲಿ ನನಗೆ ಬ್ಯಾಗಿನಲ್ಲಿದ್ದ ಕ್ಯಾಮರಾ ನೆನಪಾಯಿತು. ಪತಿರಾಯರ ಕೈಯಲ್ಲಿ ಅದನ್ನು ಕೊಟ್ಟು ಫೋಟೊ ತೆಗೆಯಲು ಹೇಳಿದೆ. ಅವರು ಡಾ. ರಾಜ್‌ರವರಿಗೆ ನಮಸ್ಕರಿಸಿ, 'ಸರ್, ದಯವಿಟ್ಟು ಒಂದು ಫೋಟೊ ತೆಗೆಯಲು ಅನುಮತಿ ಕೊಡಿ' ಎಂದು ಹೇಳಿ ಗಡಿಬಿಡಿಯಲ್ಲಿ ಕ್ಯಾಮರಾ ರೆಡಿ ಮಾಡುತ್ತ ನನಗೆ ಮತ್ತು ಮೂರು ವರ್ಷದ ಮಗ ತನ್ಮಯನಿಗೆ ರಾಜಕುಮಾರ್ ಅವರ ಹತ್ತಿರ ಹೋಗಿ ನಿಲ್ಲಲು ಹೇಳಿದರು. ನನಗೇನೋ ವಿಪರೀತ ಹೆದರಿಕೆ. ಅಂತಹ ಸುಪ್ರಸಿದ್ಧ ನಾಯಕ ನಟನ ಹತ್ತಿರ ಹೋಗಿ ಪಕ್ಕದಲ್ಲಿ ನಿಂತು ಫೋಟೊಗೆ ಪೋಸು ಹೇಗೆ ಕೊಡುವುದು?

ಆದರೂ ಗಡಿಬಿಡಿಯಲ್ಲಿ ಹೆದರಿಕೊಂಡು ಮಗನ ಸಮೇತವಾಗಿ ನಿಂತೆ. ಅವರು ಎಂದಿನಂತೆ ಸಹಜವಾದ ಮುಗುಳ್ನಗೆಯೊಂದಿಗೆ ನಿಂತರು. ತುಂಬಾ ಜನ ಸುತ್ತುವರಿದಿದ್ದರು. ಗಡಿಬಿಡಿಯಲ್ಲಿ ನನ್ನವರು ಕ್ಯಾಮೆರಾ ಕ್ಲಿಕ್ಕಿಸಿದರು. ನನ್ನ ಮಗನಿಗೆ ಜನಜಂಗುಳಿ ನೋಡಿ ಗಾಬರಿಯಾಗಿ ಅಳಲಾರಂಭಿಸಿದ. ಆಗ ಮೃದು ಹೃದಯಿ ರಾಜ್, 'ಯಾಕೆ ಮರೀ ಅಳುತ್ತೀ? ಗಾಬರಿಯಾಯಿತೇ? ಹಿಡಿ ತೆಗೆದುಕೋ' ಎಂದು ತಮ್ಮ ಕೈಯಲ್ಲಿಯ ಚಾಕೊಲೇಟು ಕೊಡುತ್ತ ತನ್ಮಯನನ್ನು ಇನ್ನೂ ಹತ್ತಿರ ಎಳೆದುಕೊಂಡರು. ಆ ಫೋಟೊವನ್ನೂ ಕೂಡ ನನ್ನವರು ಕ್ಲಿಕ್ಕಿಸಿದರು. ಆ ಮಹಾನ್ ನಟನ ಸರಳತನ ಕಂಡು ನಾವು ಮೂಕವಿಸ್ಮಿತರಾದೆವು. ನಿಜಕ್ಕೂ ಆ ಸಂದರ್ಭ ಘಟನೆ ನೆನಪಾದಾಗೆಲ್ಲ ಕನ್ನಡಿಗರ ಆರಾಧ್ಯ ದೈವ ಡಾ. ರಾಜ್ ಎಂಬುದು ನಿಜವಾಗಿಯೂ ಅನ್ವರ್ಥಕ ಇದರಲ್ಲಿ ಸಂದೇಹವಿಲ್ಲ ಎನಿಸುತ್ತದೆ. ಆದರೆ ನಮಗೆ ಅದೃಷ್ಟ ಕೈಕೊಟ್ಟಿತೋ ಎಂಬಂತೆ ಕೆಲ ಫೋಟೊಗಳು ಸರಿಯಾಗಿ ಬರಲಿಲ್ಲ. ಜನಜಂಗುಳಿ ಮತ್ತು ಗಡಿಬಿಡಿಯಲ್ಲಿ ಕ್ಯಾಮರಾ ಶೇಕ್ ಆಯಿತು. ಈ ಚಿತ್ರ ನಮಗೆ ಮೂವತ್ತು ವರ್ಷಗಳ ಹಿಂದಿನ ಆ ಅತ್ಯಂತ ಮಹತ್ವದ ಸಂದರ್ಭವನ್ನು ಸದಾ ಕಾಲವೂ ಜೀವಂತವಾಗಿಟ್ಟಿದೆ.

ಮರುದಿನ ಬೆಳಿಗ್ಗೆ ಮಂಜುನಾಥ ಸ್ವಾಮಿಗೆ ಕೈಜೋಡಿಸಿ ಬೇಡಿಕೊಂಡು ಪ್ರದಕ್ಷಿಣೆ ಬರುತ್ತಿರುವಾಗ ಪಕ್ಕದಲ್ಲಿಯೇ ಜನಪ್ರಿಯ ನಟಿ ಮಾಧವಿ ಕೂಡ ಪ್ರದಕ್ಷಿಣೆ ಹಾಕುತ್ತಿದ್ದಾರೆ. ಚಿತ್ರದ ನಾಯಕಿ ಪಾತ್ರದಲ್ಲಿದ್ದ ಅವರೂ ಕೂಡ ಅಂದು ಅಲ್ಲಿ ಇದ್ದರು. ಮಾಧವಿಯವರ ಭಾವನಾತ್ಮಕ ಅಭಿನಯವನ್ನು ಮೆಚ್ಚುವ ಅಭಿಮಾನಿ ನಾನು. ಕೂಡಲೇ ಅವರನ್ನು ಒಂದು ಫೋಟೊ ತೆಗೆದುಕೊಳ್ಳುವ ಸಲುವಾಗಿ ವಿನಂತಿಸಿದೆ. ಮಾಧವಿಯವರು ಸಂತೋಷದಿಂದಲೇ ಒಪ್ಪಿದರು. ಮಗನೊಂದಿಗೆ ಮಾಧವಿಯವರ ಪಕ್ಕದಲ್ಲಿ ಗೆಳತಿಯಂತೆ ನಿಂತು ಚಿತ್ರ ತೆಗೆಸಿಕೊಂಡು ಖುಷಿಪಟ್ಟೆ. ಈ ಚಿತ್ರ ಕಂಡಾಗಲೆಲ್ಲ ನನ್ನ ನೆಚ್ಚಿನ ತಾರೆ ಮಾಧವಿಯವರ ಸ್ನೇಹಭರಿತ ನಗೆ ಮತ್ತು ನನ್ನೊಂದಿಗೆ ಖಾಸಾ ಗೆಳತಿಯಂತೆ ನಿಂತು ಪೋಸ್ ಕೊಟ್ಟ ಬಗೆ ನೆನಪಾಗಿ ಮನಸ್ಸು ಹರ್ಷದಿಂದ ಗತಕಾಲಕ್ಕೆ ಓಡುತ್ತದೆ. ನಂತರ ತಾರೆ ಗೀತಾರವರ ಮೇಲೆ 'ಕನಸಲಿ ಬಂದವನಾ ಮನಸಲಿ ನಿಂತವನಾ' ಹಾಡಿನ ಚಿತ್ರೀಕರಣ ನಡೆಯಿತು. ಅದನ್ನು ನೋಡಿ ಸಂತಸದಿಂದ ಹಿಂದಿರುಗಿದೆವು. ಆ ಕೆಲ ಕ್ಷಣಗಳು ಯಾವಾಗಲೂ ಮನಸ್ಸಿನಲ್ಲಿ ಹಸಿರಾಗಿಯೇ ಉಳಿದುಬಿಟ್ಟಿವೆ. ■



